ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೧೫

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತೆಂಟನೆಯ ಅಧಿವೇಶನ
## (ಮುಂದುವರೆದ ಉಪವೇಶನ)

**ಬುಧವಾರ, ದಿನಾಂಕ : ೨೫ನೇ ಮಾರ್ಚ್, ೨೦೨೬**

---

**ಸಮೂಹ – III**

೧. ಸಾರಿಗೆ ಮತ್ತು ಮುಜರಾಯಿ ಸಚಿವರು

೨. ಲೋಕೋಪಯೋಗಿ ಸಚಿವರು

೩. ಕಂದಾಯ ಸಚಿವರು

೪. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

೫. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

೬. ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

---

## ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಕಂಕನವಾಡಿ ನಡುಗಡ್ಡೆ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) –**

೨೧೧ (೨೧೩೪) ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಕಂಕನವಾಡಿ ನಡುಗಡ್ಡೆಯ ಪ್ರದೇಶದಲ್ಲಿ ಕೃಷ್ಣಾ ನದಿಯ ಮಹಾಪೂರದಿಂದ ಕಂಕನವಾಡಿ ನಡುಗಡ್ಡೆಯ ಜನರಿಗೆ ಪ್ರಯಾಣಕ್ಕೆ ಹಾಗೂ ಸದರಿ ಭಾಗದಲ್ಲಿ ಬೆಳೆದ ಕಬ್ಬು ಹಾಗೂ

ಇತರೆ ಬೆಳೆಗಳನ್ನು ಸಾಗಿಸಲು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಸದರಿ ನಡುಗಡ್ಡೆ ಪ್ರದೇಶದಲ್ಲಿ ದೊಡ್ಡ ದೋಣಿಯನ್ನು ನೀಡಲು ಇರುವ ಅಡಚಣೆಗಳೇನು, ಸೂಕ್ತ ಕಾರಣಗಳಿಂದ ವಿವರಿಸಿ ಮತ್ತು ಎಲ್‌ಸಿಟಿ ಬಾರ್ಜ/ಮಿನಿ ಎಲ್‌ಸಿಟಿ ಬಾರ್ಜ ನೀಡುವ ಚಿಂತನೆ ಸರ್ಕಾರದ ಮುಂದಿದೆಯೇ ; ಯಾವ ಕಾಲಮಿತಿಯೊಳಗೆ ನೀಡಲಾಗುವುದು ;

(ಇ) ಕಂಕನವಾಡಿ ನಡುಗಡ್ಡೆಗೆ ರಸ್ತೆ ಸಂಪರ್ಕ ಇರದ ಕಾರಣ ಹಾಗೂ ರೈತರ ಹಿತದೃಷ್ಠಿಯಿಂದ ದೊಡ್ಡ ಎಲ್‌ಸಿಟಿ ಬಾರ್ಜ/ಮಿನಿ ಎಲ್‌ಸಿಟಿ ಬಾರ್ಜ ನೀಡಿ ರೈತರ ಹಿತ ಕಾಪಾಡಲು ಸರ್ಕಾರದ ನಿಲುವೇನು ;

(ಈ) ಈ ನಡುಗಡ್ಡೆಯ ರೈತರು ತಾವು ಬೆಳೆದ ಬೆಳೆಗಳನ್ನು ಸಾಗಿಸಲು ನದಿ ದಾಟಿ ಸಾಗಿಸುವ ಪರಿಸ್ಥಿತಿ ನಿರ್ಮಾಣವಾಗಿರುವುದು ನೋವಿನ ಸಂಗತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ; ಬಂದಿದ್ದರೆ ಈ ಕುರಿತು ಸರ್ಕಾರದ ಸ್ಪಷ್ಟನೆ ಏನು ; (ವಿವರ ನೀಡುವುದು) ನಡುಗಡ್ಡೆ ಎರಡು ಬದಿ ರ್‍ಯಾಂಪ್ ನಿರ್ಮಾಣದ ಕುರಿತು ಸರ್ಕಾರದ ನಿಲುವೇನು ; ಇದರ ನಿರ್ಮಾಣ ಕಾಮಗಾರಿಗೆ ಅನುದಾನ ಒದಗಿಸಲಾಗಿದೆಯೇ ; ಅನುದಾನ ಒದಗಿಸಲಾಗಿದ್ದಲ್ಲಿ ಎಷ್ಟು ಅನುದಾನ ನೀಡಲಾಗಿದೆ ; ಯಾವಾಗ ನೀಡಲಾಗಿದೆ ?

## ಕುಟುಂಬ ಆದಾಯ ಮಿತಿಯಿಂದ ಸಾಮಾಜಿಕ ಭದ್ರತಾ ಮಾಸಿಕ ಪಿಂಚಣಿಗಳು ನಿಲ್ಲುತ್ತಿರುವ ಕುರಿತು

**ಡಾ: ಯತೀಂದ್ರ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) –**

೨೧೨ (೨೦೪೯) ಕಂದಾಯ ಸಚಿವರು  ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರವು ಅಸಹಾಯಕ, ಅಶಕ್ತ ವ್ಯಕ್ತಿಗಳಿಗಾಗಿ ಹಾಗೂ ನಿರ್ಗತಿಕ ವಿಧವೆಯರಿಗೆ ಮತ್ತು ಅಂಗವಿಕಲರಿಗೆ ಅನೇಕ ಸಾಮಾಜಿಕ ಭದ್ರತೆ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದ್ದು, ಸದರಿ ಪಿಂಚಣಿಗಳನ್ನು ಪಡೆಯಲು ಕುಟುಂಬದ ಆದಾಯದ ಮಿತಿಯನ್ನು ೩೦ ಸಾವಿರ ವಿಧಿಸಲಾಗಿದೆಯೆ ;

(ಆ) ಆದರೆ ೨೦೨೩ರ ನಂತರ ಗ್ಯಾರಂಟಿ ಯೋಜನೆಗಳಿಂದ ಕುಟುಂಬ ಆದಾಯ ೩೦ ಸಾವಿರಕ್ಕಿಂತ ಹೆಚ್ಚಿದ್ದು, ಇದರಿಂದ ನಾಗರಿಕರು ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಸೇವೆಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ಒದಗಿಸುವುದು)

## ಮುಜರಾಯಿ ದೇವಾಲಯಗಳಲ್ಲಿ ಚಿತ್ರೀಕರಣಕ್ಕೆ ಶುಲ್ಕ ನಿಗದಿ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) –**

೨೧೩ (೨೦೦೭) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮುಜರಾಯಿಗೆ ಸೇರಿದ ಎಲ್ಲಾ 'ಎ' ಮತ್ತು 'ಬಿ' ಗ್ರೇಡ್ ದೇವಾಲಯಗಳಲ್ಲಿ ಚಿತ್ರೀಕರಣಕ್ಕೆ ಅನುಮತಿ ಪಡೆಯುವುದು ಕಡ್ಡಾಯವೇ ;

(ಆ) ಇದ್ದಲ್ಲಿ, ಸಿನಿಮಾ (ಕನ್ನಡ ಭಾಷೆ, ಅನ್ಯ ಭಾಷೆ), ಧಾರಾವಾಹಿ, ಸಾಕ್ಷ್ಯಚಿತ್ರ, ಸುದ್ದಿವಾಹಿನಿಗಳು ಚಿತ್ರೀಕರಣ ಮಾಡಲು ಪಾವತಿಸಬೇಕಿರುವ ಶುಲ್ಕ ಎಷ್ಟು ; ಷರತ್ತುಗಳೇನು ; ಸಂಗ್ರಹವಾದ ಶುಲ್ಕವನ್ನು ಯಾವ ಉದ್ದೇಶಕ್ಕೆ ಬಳಸಲಾಗುತ್ತದೆ ; (ಸಂಪೂರ್ಣ ವಿವರ ನೀಡುವುದು)

(ಇ) ಮುಜರಾಯಿ ದೇವಾಸ್ಥಾನಗಳಲ್ಲಿ ಚಿತ್ರೀಕರಣಕ್ಕೆ ಶುಲ್ಕ ನಿಗದಿಪಡಿಸಿ ೧೦ಕ್ಕೂ ಹೆಚ್ಚು ವರ್ಷಗಳೇ ಕಳೆದಿರುವುದರಿಂದ ಶುಲ್ಕ ಪರಿಷ್ಕರಿಸಲು ಸರ್ಕಾರ ಉದ್ದೇಶಿಸಿದೆಯೇ ; ಇದ್ದಲ್ಲಿ, ಈ ಬಗ್ಗೆ ವಿವರವಾದ ಮಾಹಿತಿ ನೀಡುವುದು ;

(ಈ) ಬೆಂಗಳೂರು ನಗರ ಪ್ರದೇಶದಲ್ಲಿ ಚಲನಚಿತ್ರಗಳ ಚಿತ್ರೀಕರಣಕ್ಕೆ ರೂ. ೧೫ ಸಾವಿರ ಮತ್ತು ಇತರೆ ಪ್ರದೇಶಗಳ ದೇವಸ್ಥಾನದಲ್ಲಿ ರೂ. ೧೦ ಸಾವಿರ ಇದ್ದರೆ ಮಂಡ್ಯ ಜಿಲ್ಲೆ ಮೇಲುಕೋಟೆಯಲ್ಲಿ ಮಾತ್ರ ಕನ್ನಡ ಚಲನಚಿತ್ರಗಳಿಗೆ ರೂ. ೧೬ ಸಾವಿರ ಹಾಗೂ ಅನ್ಯಭಾಷೆಗಳಿಗೆ ರೂ. ೨೦ ಸಾವಿರ ಶುಲ್ಕ ಇರುವುದಕ್ಕೆ ಕಾರಣವೇನು ; ಯಾವ ಮಾನದಂಡವನ್ನು ಅನುಸರಿಸಿ ನಿಗದಿಪಡಿಸಲಾಗಿದೆ ; (ವಿವರವಾದ ಮಾಹಿತಿ ನೀಡುವುದು)

(ಉ) ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಲ್ಲಿರುವ 'ಎ' ಮತ್ತು 'ಬಿ' ಗ್ರೇಡ್ ದೇವಾಲಯಗಳ ಸಂಖ್ಯೆ ಎಷ್ಟು ; ಯಾವುವು ; ಯಾವ್ಯಾವ ದೇವಾಲಯಗಳಲ್ಲಿ ಚಿತ್ರೀಕರಣ ನಡೆದಿದೆ ; ಸಂಗ್ರಹವಾದ ಶುಲ್ಕವೆಷ್ಟು ; (ಜಿಲ್ಲಾವಾರು, ದೇವಾಲಯವಾರು ಮಾಹಿತಿ ನೀಡುವುದು)

(ಊ) ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಚಿತ್ರೀಕರಣದಿಂದ [ಸಿನಿಮಾ (ಕನ್ನಡ ಭಾಷೆ, ಅನ್ಯ ಭಾಷೆ), ಧಾರಾವಾಹಿ, ಸಾಕ್ಷ್ಯಚಿತ್ರ, ಸುದ್ದಿವಾಹಿನಿಗಳು] ಕಳೆದ ಮೂರು ವರ್ಷಗಳಲ್ಲಿ ಸಂಗ್ರಹವಾದ ಶುಲ್ಕವೆಷ್ಟು ; (ವರ್ಷವಾರು, ವರ್ಗವಾರು ಮಾಹಿತಿ ನೀಡುವುದು)

(ಋ) ಯಾವ್ಯಾವ ಸಿನಿಮಾ (ಕನ್ನಡ ಭಾಷೆ, ಅನ್ಯ ಭಾಷೆ), ಧಾರಾವಾಹಿ, ಸಾಕ್ಷ್ಯಚಿತ್ರಗಳ ಚಿತ್ರೀಕರಣಕ್ಕೆ ಅನುಮತಿಸಲಾಗಿದೆ ? (ವಿವರ ನೀಡುವುದು)

## ಉತ್ತರ ಕನ್ನಡ ಜಿಲ್ಲೆಯ ರಸ್ತೆಗಳ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) –**

೨೧೪ (೨೧೧೬) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಬರುವ ಗ್ರಾಮೀಣ ಭಾಗದ ರಸ್ತೆಗಳು ತುಂಬಾ ಹದಗೆಟ್ಟಿರುವುದರಿಂದ, ಅಲ್ಲಿನ ಬುಡಕಟ್ಟು, ವನವಾಸಿ & ಹಿಂದುಳಿದ ಜನಾಂಗದವರಿಗೆ ದಿನನಿತ್ಯ ಓಡಾಡುವುದು ತುಂಬಾ ಕಷ್ಟಕರವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಜಿಲ್ಲೆಯಲ್ಲಿನ ಸದರಿ ರಸ್ತೆಗಳನ್ನು ಸರಿಪಡಿಸಲು ಪ್ರಸ್ತುತ ಸಾಲಿನಲ್ಲಿ ಸರ್ಕಾರ ಒದಗಿಸಿದ ಅನುದಾನ ಎಷ್ಟು ; ಮತ್ತು ಯಾವ ಯಾವ ರಸ್ತೆಗಳ ಕಾಮಗಾರಿಯನ್ನು ಕೈಗೊಳ್ಳಲಾಗಿದೆ ? (ಮಾಹಿತಿ ನೀಡುವುದು)

## ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) –**

೨೧೫ (೨೦೦೩) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕದಲ್ಲಿ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರವು ಯಾವಾಗ ರಚನೆ ಆಗಿರುತ್ತದೆ ; ಪ್ರಾಧಿಕಾರದ ಕಾರ್ಯಗಳೇನು ; ಇಲ್ಲಿಯವರೆಗೂ ಪ್ರಾಧಿಕಾರ ಎಷ್ಟು ಸಭೆಗಳನ್ನು ನಡೆಸಿರುತ್ತದೆ ;

(ಆ) ರಸ್ತೆ ಸುರಕ್ಷತೆ ಸಂಬಂಧ ಕೇಂದ್ರ ಸರ್ಕಾರ ಯಾವ ಯಾವ ಆರ್ಥಿಕ ಸಹಾಯದ ಯೋಜನೆಗಳನ್ನು ನೀಡುತ್ತಿದೆ ; (ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ರಸ್ತೆ ಸುರಕ್ಷತೆ ಸಂಬಂಧ ದೊರೆತಿರುವ ಆರ್ಥಿಕ ಸಹಾಯದ ವಿವರಗಳನ್ನು ಒದಗಿಸುವುದು)

(ಇ) ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರವು ರಾಜ್ಯದಲ್ಲಿ ಯಾವ ಯಾವ ರಸ್ತೆ ಸುರಕ್ಷತಾ ಕ್ರಮಗಳನ್ನು ಕೈಗೊಂಡಿರುತ್ತದೆ ; ಕಳೆದ ಮೂರು ವರ್ಷಗಳಲ್ಲಿ ಚಟುವಟಿಕೆಗಳ ವಿವರಗಳನ್ನು ಒದಗಿಸುವುದು ;

(ಈ) ರಾಜ್ಯದಲ್ಲಿ ಹಿಟ್ ಅಂಡ್ ರನ್ ಮೋಟಾರು ಅಪಘಾತಗಳ ಯೋಜನೆ ಎಂದಿನಿಂದ ಜಾರಿಯಾಗಿರುತ್ತದೆ ; ಈ ಯೋಜನೆಯ ಅಡಿಯಲ್ಲಿ ಯಾವ ಯಾವ ಸಂತ್ರಸ್ತರಿಗೆ ಪರಿಹಾರ ದೊರೆಯುತ್ತದೆ ; ಈ ಯೋಜನೆಯ ಅಡಿಯಲ್ಲಿ ಇಲ್ಲಿಯವರೆಗೆ ಎಷ್ಟು ಸಂತ್ರಸ್ತರಿಗೆ ಪರಿಹಾರವನ್ನು ಒದಗಿಸಲಾಗಿರುತ್ತದೆ ; (ಕಳೆದ ಮೂರು ವರ್ಷಗಳ ಫಲಾನುಭವಿಗಳ ವಿವರಗಳನ್ನು ಒದಗಿಸುವುದು)

(ಉ) ರಾಜ್ಯದಲ್ಲಿ ರಾಜ್ಯ ರಸ್ತೆ ಸುರಕ್ಷತಾ ನೀತಿ ಎಂದಿನಿಂದ ಜಾರಿಗೆ ತರಲಾಗಿರುತ್ತದೆ ; ಎಷ್ಟು ವರ್ಷಗಳಿಗೆ ಒಮ್ಮೆ ರಸ್ತೆ ಸುರಕ್ಷತಾ ನೀತಿಯನ್ನು ಪರಿಷ್ಕರಣೆ ಮಾಡಲಾಗುವುದು ; (ಪ್ರಸ್ತುತ ಸುರಕ್ಷತಾ ನೀತಿಯ ಪ್ರತಿಯನ್ನು ಒದಗಿಸುವುದು)

(ಊ) ರಾಜ್ಯದಲ್ಲಿ ರಸ್ತೆ ಸುರಕ್ಷತಾ ಆಡಿಟ್ ಮಾಡಲಾಗಿದೆಯೇ ; (ಮಾಡಿದ್ದಲ್ಲಿ, ಅದರ ವರದಿ ಮತ್ತು ವಿವರಗಳನ್ನು ಒದಗಿಸುವುದು)

(ಋ) ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಅಡಿಯಲ್ಲಿ ಕರ್ನಾಟಕದ ರಸ್ತೆಯಲ್ಲಿ ಎಷ್ಟು ಕಪ್ಪು ಚುಕ್ಕೆ ಸ್ಥಳಗಳನ್ನು ಇಲ್ಲಿಯವರೆಗೆ ಗುರುತಿಸಲಾಗಿದೆ ; ಕಪ್ಪು ಚುಕ್ಕೆ ಸ್ಥಳಗಳನ್ನು ಗುರುತಿಸಲು ಇರುವ ನಿಯಮಗಳೇನು ; ಇದನ್ನು ತಗ್ಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ರಾಜ್ಯದ ರಸ್ತೆಯಲ್ಲಿ ಗುರುತಿಸಿರುವ ಕಪ್ಪು ಚುಕ್ಕೆ ಸ್ಥಳಗಳ ವಿವರಗಳನ್ನು ಒದಗಿಸುವುದು)

## ಪೋಡಿ ತಿದ್ದುಪಡಿಯು ವಿಳಂಬವಾಗುತ್ತಿರುವ ಕುರಿತು

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) –**

೨೧೬ (೨೧೮೯) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆಯಲ್ಲಿ ಸರ್ಕಾರದಿಂದ ಎಷ್ಟು ರೈತರಿಗೆ ಭೂಮಿಯನ್ನು ಮಂಜೂರು ಮಾಡಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಎಷ್ಟು ಜನ ರೈತರಿಗೆ ಭೂಮಿಯನ್ನು ಪೋಡಿ ದುರಸ್ತಿ ಮಾಡಿಕೊಡಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು) ಉಳಿದ ರೈತರ ಭೂಮಿಯನ್ನು ಯಾವ ಕಾಲಮಿತಿಯಲ್ಲಿ ದುರಸ್ತಿ ಮಾಡಿಕೊಡಲಾಗುವುದು ;

(ಇ) ತಾಲ್ಲೂಕು ಕಾರ್ಯಾಲಯದಲ್ಲಿ ಪೋಡಿ ದುರಸ್ತಿಗೆ ಅಗತ್ಯವಿರುವ ದಾಖಲೆಗಳು ಲಭ್ಯವಿಲ್ಲದ ಕಾರಣ ಪೋಡಿ ಮಾಡದೆ ರೈತರಿಗೆ/ಭೂ ಮಂಜೂರಿದಾರರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ದಾಖಲೆಗಳು ಲಭ್ಯವಿಲ್ಲದೆ ಇರುವ ಸಂದರ್ಭಗಳಲ್ಲಿ ಪೋಡಿ ದುರಸ್ತಿ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮವೇನು ;

(ಈ) ಪೋಡಿ ದುರಸ್ತಿಗೆ ಅಗತ್ಯವಿರುವ ಎಲ್ಲಾ ದಾಖಲೆಗಳು ರೈತರ ಬಳಿ ಇಲ್ಲದ ಕಾರಣ ರೈತರಿಗೆ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸಲು ಸಾಧ್ಯವಾಗದ ಕಾರಣ ಕಂದಾಯ ಇಲಾಖೆಯವರೆ ಅಭಿಲೇಖಾಲಯದಿಂದ ದಾಖಲೆಗಳನ್ನು ಪಡೆದು ಪೋಡಿ ದುರಸ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು ;

(ಉ) ಭೂಮಾಪಕರ ಸಂಖ್ಯೆ ಕಡಿಮೆಯಿರುವ ಕಾರಣ ಸರ್ವೆ ಕಾರ್ಯ ಮಂದಗತಿಯಲ್ಲಿ ಸಾಗುತ್ತಿದ್ದು ಭೂಮಾಪಕರ ನೇಮಕಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ?

# ಕ್ರೈಸ್ತ ಅಭಿವೃದ್ಧಿ ನಿಗಮಕ್ಕೆ ಸ್ವಂತ ಕಟ್ಟಡ ಒದಗಿಸುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) –**

೨೧೭ (೨೦೨೨) ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕ್ರೈಸ್ತ ಅಭಿವೃದ್ಧಿ ನಿಗಮಕ್ಕೆ ಸ್ವಂತ ಕಟ್ಟಡ ಒದಗಿಸಿಕೊಡಲು ಸರ್ಕಾರ ವಹಿಸಿದ ಕ್ರಮವೇನು ; ಎಲ್ಲಿ ಯಾವ ಸ್ಥಳದಲ್ಲಿ ಮಾಡಲಾಗುವುದು ; ಅದಕ್ಕಾಗಿ ಮೀಸಲಿಟ್ಟ ಹಣ ಎಷ್ಟು ; (ವಿವರ ನೀಡುವುದು)

(ಆ) ಸದರಿ ನಿಗಮ ರಾಜ್ಯಾದ್ಯಂತ ಕಾರ್ಯನಿರ್ವಹಣೆ ಮಾಡಲು ಯಾವ ಯಾವ ಕೇಂದ್ರಗಳಲ್ಲಿ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ ; ಯಾವ ಯಾವ ಹಂತದ ಅಧಿಕಾರಿಗಳು ಅದರ ಉಸ್ತುವಾರಿಯನ್ನು ವಹಿಸಲಿರುವರು ; (ಈ ಬಗ್ಗೆ ಸ್ಪಷ್ಟ ಮಾಹಿತಿ ನೀಡುವುದು)

(ಇ) ಕ್ರೈಸ್ತ ಸಮುದಾಯದ ಮತ್ತು ಜನಜೀವನ ಕಸುಬು, ಆರ್ಥಿಕ ಪರಿಸ್ಥಿತಿ ಶಿಕ್ಷಣದ ಸ್ಥಿತಿಗತಿ ಬಗ್ಗೆ ರಾಜ್ಯ ಸರ್ಕಾರ ಅಂಕಿಅಂಶಗಳ ವರದಿಯನ್ನು ಪಡೆದಿದೆಯೇ ; (ವಿವರ ನೀಡುವುದು)

(ಈ) ಕ್ರೈಸ್ತ ಸಮುದಾಯ ಈಗ ೩ ಬಿ ಯಲ್ಲಿದ್ದು ಇವರು ೨ ಬಿ ಸೇರಿಸಬೇಕೆಂಬ ಅಥವಾ ೨ ಸಿ ಹೊಸ ಗುಂಪನ್ನು ಸೃಷ್ಟಿಸಿ, ನೂತನ ಗುಂಪನ್ನು ಮಾಡಬೇಕೆಂಬ ಬೇಡಿಕೆ ಇದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ;

(ಉ) ಕ್ರೈಸ್ತ ಸಮುದಾಯದವರು ಬೇರೆ ಸಮುದಾಯದಂತೆ ತಮ್ಮ ಪವಿತ್ರ ಯಾತ್ರಾ ಸ್ಥಳವಾದ ಜೆರುಸಲೆಮ್ ತೆರಳಲು ಅವಕಾಶ ಮಾಡಿಕೊಡಬೇಕೆಂಬ ಕ್ರೈಸ್ತ ಸಮುದಾಯದವರ ಬೇಡಿಕೆ ಇದ್ದು, ಈ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೈಗೊಂಡ ಕ್ರಮವೇನು ? (ವಿವರ ನೀಡುವುದು)

## ತಸ್ತೀಕ್ ಮೊತ್ತ ಏರಿಕೆ ಮಾಡುವ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾಸಭೆಯಿಂದ ಚುನಾಯಿತರಾದವರು) –**

**ಡಾ: ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) –**

೨೧೮ (೨೦೭೫+೨೦೭೧) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ 'ಸಿ' ವರ್ಗದ ದೇವಾಲಯದ ಅರ್ಚಕರಿಗೆ ಮಾಸಿಕವಾಗಿ ಎಷ್ಟು ಗೌರವಧನ (ತಸ್ತೀಕ್) ನೀಡಲಾಗುತ್ತಿದೆ ; ಈ ಗೌರವಧನವನ್ನು ಹೆಚ್ಚಿಸಲು ಸರ್ಕಾರ ಚಿಂತಿಸಿದೆಯೇ ; ಹಾಗಿದ್ದಲ್ಲಿ, ಎಷ್ಟು ಗೌರವಧನ ಹೆಚ್ಚಿಸಲಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜ್ಯದಲ್ಲಿ 'ಸಿ' ವರ್ಗದ ದೇವಸ್ಥಾನಗಳ ಅರ್ಚಕರಿಗೆ ಪ್ರಸ್ತುತ ನೀಡುತ್ತಿರುವ ತಸ್ತೀಕ್ ಮೊತ್ತವೆಷ್ಟು ;

(ಇ) ರಾಜ್ಯದಲ್ಲಿ ಮುಜರಾಯಿ ದೇವಸ್ಥಾನಗಳ ಪೈಕಿ ಶೇ. ೯೦ ಗ್ರಾಮೀಣ ಪ್ರದೇಶಗಳಲ್ಲಿರುವ 'ಸಿ' ವರ್ಗದ ದೇವಸ್ಥಾನಗಳಿದ್ದು, ಈ ದೇವಸ್ಥಾನಗಳ ಅರ್ಚಕರಿಗೆ ಪ್ರಸ್ತುತ ನೀಡುತ್ತಿರುವ ತಸ್ತೀಕ್ ಮೊತ್ತ ಕನಿಷ್ಠ ವೇತನಕ್ಕಿಂತಲೂ ಕಡಿಮೆ ಇದ್ದು, ಆ ಅರ್ಚಕರು ಸಂಕಷ್ಟದ ಪರಿಸ್ಥಿತಿಯಲ್ಲಿದ್ದರೂ ಸಹ ಅವರ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಇದುವರೆಗೆ ಯಾವುದೇ ಕ್ರಮ ವಹಿಸದಿರಲು ಕಾರಣಗಳೇನು ;

(ಈ) ಯಾವ ಕಾಲಮಿತಿಯೊಳಗೆ ತಸ್ತೀಕ್ ಮೊತ್ತವನ್ನು ಕನಿಷ್ಠ ೧೦ ಸಾವಿರ ರೂ.ಗೆ ಹೆಚ್ಚಿಸುವುದು ಹಾಗೂ ದೇವಸ್ಥಾನದ ಪೂಜಾ ದ್ರವ್ಯಗಳಿಗಾಗಿ ೫ ಸಾವಿರ ರೂ. ನೀಡುವುದು ಜೊತೆಗೆ ದೇವಸ್ಥಾನಗಳಲ್ಲಿ ಕೆಲಸ ಮಾಡುವ ಇತರ ಉದ್ಯೋಗಿಗಳಿಗೆ ತಿಂಗಳಿಗೆ ಕನಿಷ್ಠ ೫ ಸಾವಿರ ರೂ. ನೀಡಲು ಅಗತ್ಯ ಕ್ರಮ ವಹಿಸಲಾಗುವುದು ;

(ಉ) ದೇವಸ್ಥಾನಗಳಿಗೆ ಸೇರಿದ ಹತ್ತಾರು ಸಾವಿರ ಎಕರೆಗಳಷ್ಟು ಭೂಮಿ ಹಾಗೂ ಅಮೂಲ್ಯ ಆಸ್ತಿ ಸಂಪತ್ತುಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ವಸತಿ ಇಲಾಖೆಯಿಂದ ನಿರ್ಮಾಣ ಮಾಡಲಾಗಿರುವ ಬಡಾವಣೆ ಹಾಗೂ ಭೂ ಮಾಲೀಕರಿಗೆ ಪರಿಹಾರ ನೀಡುವ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೨೧೯ (೨೦೮೭) ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಸತಿ ಇಲಾಖೆಯಡಿಯಲ್ಲಿ ಬರುವ ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ, ಕರ್ನಾಟಕ ಗೃಹ ಮಂಡಳಿಗಳಿಂದ ಬಡವರಿಗೆ ಮತ್ತು ಮಧ್ಯಮ ವರ್ಗದವರಿಗೆ ಎಷ್ಟು ನಿವೇಶನ/ಮನೆಗಳನ್ನು ಕಳೆದ ೩ ವರ್ಷದಿಂದ ಇಲ್ಲಿಯವರೆಗೂ ನೀಡಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಕರ್ನಾಟಕ ಗೃಹ ಮಂಡಳಿಯಿಂದ ಎಷ್ಟು ಜಾಗದಲ್ಲಿ ಖಾಲಿ ನಿವೇಶನ ಹಾಗೂ ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಾಣ ಮಾಡಲಾಗಿದೆ ; ಇದಕ್ಕಾಗಿ ಎಷ್ಟು ಜಮೀನುಗಳನ್ನು ಖರೀದಿಸಲಾಗಿದೆ ; ಜಮೀನಿನ ಮಾಲೀಕರಿಗೆ ಭೂ ಪರಿಹಾರ ಹಣವನ್ನು ನೀಡಲಾಗಿದೆಯೇ ; ಇದರ ಮೊತ್ತವೆಷ್ಟು ; ನಿವೇಶನ ಮಾರಾಟದಿಂದ ಸಾರ್ವಜನಿಕರಿಂದ ಬಂದ ಹಣವೆಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿಯಿಂದ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿರುವ ಬಡವರಿಗೆ ಎಷ್ಟು ಮನೆಗಳನ್ನು ನಿರ್ಮಾಣ ಮಾಡಿಕೊಡಲಾಗಿದೆ ; ನಿರ್ಮಾಣ ಮಾಡಲಾಗಿರುವ ಜಮೀನು ಸರ್ಕಾರದ ಆಸ್ತಿಯೇ ಅಥವಾ ಖಾಸಗಿ ಆಸ್ತಿಯೇ ; (ಪೂರ್ಣ ವಿವರ ನೀಡುವುದು)

(ಈ) ಖಾಸಗಿ ಮಾಲೀಕತ್ವದ ಆಸ್ತಿಯನ್ನು ಕೊಳಚೆ ಅಭಿವೃದ್ಧಿ ಮಂಡಳಿಯು ಪಡೆದಿದ್ದಲ್ಲಿ, ಪರಿಹಾರ ರೂಪದಲ್ಲಿ ನೀಡಬೇಕಾಗಿರುವ ಹಣ ಮತ್ತು ಟಿಡಿಆರ್‌ಗಳನ್ನು ಎಷ್ಟು ಖಾಸಗಿ ಭೂಮಾಲೀಕರಿಗೆ ನೀಡಬೇಕಾಗಿದೆ ? (ಪೂರ್ಣ ವಿವರ ನೀಡುವುದು)

## ಹಾರೋಹಳ್ಳಿ ನೂತನ ತಾಲ್ಲೂಕಿನ ಆಡಳಿತ ಸೌಧ ನಿರ್ಮಾಣದ ಬಗ್ಗೆ

**ಶ್ರೀ ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೨೨೦ (೨೧೩೭) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ದಕ್ಷಿಣ ಜಿಲ್ಲೆಯ ಹಾರೋಹಳ್ಳಿಯನ್ನು ನೂತನ ತಾಲ್ಲೂಕು ಎಂದು ಘೋಷಣೆ ಮಾಡಿ ೨ ವರ್ಷಗಳಾಗಿದ್ದು, ಇಲ್ಲಿ ತಾಲ್ಲೂಕು ಮಟ್ಟದ ಕಛೇರಿಗಳನ್ನು ನಿರ್ಮಾಣ ಮಾಡಲು ಸ್ಥಳಗಳನ್ನು ಗುರುತಿಸಲಾಗಿದೆಯೇ ; ಗುರುತಿಸಿದ್ದಲ್ಲಿ, ಯಾವ ಯಾವ ಕಛೇರಿಗಳಿಗೆ ಎಲ್ಲೆಲ್ಲಿ ಮತ್ತು ಎಷ್ಟು ಜಾಗವನ್ನು ಗುರುತಿಸಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಆ) ಹಾರೋಹಳ್ಳಿ ನೂತನ ತಾಲ್ಲೂಕಿನ ಆಡಳಿತ ಸೌಧ (ಮಿನಿ ವಿಧಾನಸೌಧ) ಕಛೇರಿ ನಿರ್ಮಾಣಕ್ಕಾಗಿ ಮತ್ತು ಮೂಲಭೂತ ಸೌಕರ್ಯಗಳಿಗಾಗಿ ಎಷ್ಟು ಅನುದಾನ ಮೀಸಲಿರಿಸಲಾಗಿದೆ ; ಇಲ್ಲಿಯವರೆಗೆ ಬಿಡುಗಡೆಯಾಗಿರುವ ಅನುದಾನವೆಷ್ಟು ; ಈ ಕಛೇರಿಗೆ ಕಲ್ಪಿಸುತ್ತಿರುವ ಮೂಲಭೂತ ಸೌಕರ್ಯಗಳೇನು ? (ಸಂಪೂರ್ಣ ವಿವರ ನೀಡುವುದು)

## ತುಮಕೂರು–ನೆಲಮಂಗಲ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಬಗ್ಗೆ

**ಶ್ರೀ ರಾಜೇಂದ್ರ ರಾಜಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೨೧ (೨೦೯೦) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು–ನೆಲಮಂಗಲ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯು ಕುಂಠಿತವಾಗಿದ್ದು, ನಿರಂತರ ಟ್ರಾಫಿಕ್ ಸಮಸ್ಯೆ ಹಾಗೂ ಅಪಘಾತ ಪ್ರಕರಣಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ತುಮಕೂರು–ನೆಲಮಂಗಲ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು ?

## ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದ ಸಮಗ್ರ ಅಭಿವೃದ್ಧಿ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು)**

೨೨೨ (೨೧೨೨) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೫–೨೬ನೇ ಸಾಲಿನಲ್ಲಿ ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನಕ್ಕೆ ಲಭಿಸಿದ ಒಟ್ಟು ಆದಾಯ ಎಷ್ಟು ;

(ಆ) ಶ್ರೀ ಹುಲಿಗೆಮ್ಮ ದೇವಿ ದೇವಸ್ಥಾನದ ಸಮಗ್ರ ಅಭಿವೃದ್ಧಿಗಾಗಿ ಎಷ್ಟು ಮೊತ್ತದ ಕ್ರಿಯಾ ಯೋಜನೆ (Action Plan) ಹಾಗೂ ಮಾಸ್ಟರ್ ಪ್ಲಾನ್ ರೂಪಿಸಲಾಗಿದೆ ; ಯೋಜನೆಯ ಅಂದಾಜು ವೆಚ್ಚ ಎಷ್ಟು ;

(ಇ) ಈ ಯೋಜನೆ ಅಡಿಯಲ್ಲಿ ಒಳಗೊಂಡಿರುವ ಮೂಲಭೂತ ಸೌಕರ್ಯಗಳು ಯಾವುವು ; (ವಿವರ ನೀಡುವುದು)

(ಈ) ಸದರಿ ಕ್ರಿಯಾ ಯೋಜನೆ (Action Plan) ಹಾಗೂ ಮಾಸ್ಟರ್ ಪ್ಲಾನ್‌ಗೆ ಸರ್ಕಾರದಿಂದ ಅನುಮೋದನೆ ಲಭಿಸಿರುವುದೇ ; ಲಭಿಸಿದ್ದಲ್ಲಿ, ಯಾವ ದಿನಾಂಕದಲ್ಲಿ ಅನುಮೋದನೆ ನೀಡಲಾಗಿದೆ ; ಸಂಬಂಧಿಸಿದ ಸರ್ಕಾರದ ಆದೇಶ (GO) ಪ್ರತಿಯನ್ನು ಒದಗಿಸುವುದು ;

(ಉ) ಯೋಜನೆಯನ್ನು ಯಾವಾಗ ಅನುಷ್ಠಾನಗೊಳಿಸಲಾಗುವುದು ; ಪ್ರಸ್ತುತ ಯಾವ ಯಾವ ಕಾಮಗಾರಿಗಳು ಪ್ರಾರಂಭಗೊಂಡಿವೆ ; ಅವುಗಳ ವೆಚ್ಚ, ಗುತ್ತಿಗೆದಾರರ ಹೆಸರು ಹಾಗೂ ಪೂರ್ಣಗೊಳ್ಳುವ ಅವಧಿಯ ವಿವರ ಒದಗಿಸುವುದು ;

(ಊ) ದೇವಸ್ಥಾನದಲ್ಲಿ ಭಕ್ತಾದಿಗಳಿಗೆ ಅಗತ್ಯ ಮೂಲಸೌಕರ್ಯಗಳ ಕೊರತೆಯಿಂದ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದ್ದಲ್ಲಿ, ಶಾಶ್ವತ ಪರಿಹಾರಕ್ಕಾಗಿ ಸರ್ಕಾರ ಕೈಗೊಳ್ಳಲಿರುವ ಕ್ರಮಗಳು ಯಾವುವು ?

**ರಾಜ್ಯದ ಮುಜರಾಯಿ ದೇವಸ್ಥಾನಗಳ ಸಂಪನ್ಮೂಲ ಬಳಕೆ ಕುರಿತು**

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೨೩ (೨೧೧೪) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿರುವ ಕುಕ್ಕೆ ಶ್ರೀ ಸುಬ್ರಹ್ಮಣ್ಯ, ಕದ್ರಿ ಶ್ರೀ ಮಂಜುನಾಥ, ಶ್ರೀ ಮಂಗಳೂರು ಮಂಗಳಾ ದೇವಿ, ಕೊಲ್ಲೂರು ಮೂಕಾಂಬಿಕಾ ಈ ನಾಲ್ಕು ದೇವಾಲಯಗಳ ಇತಿಹಾಸದ ಕುರಿತು ಸರ್ಕಾರದ ಅಧಿಕೃತ ದಾಖಲೆಗಳಲ್ಲಿ ಲಭ್ಯವಿರುವ ಮಾಹಿತಿಗಳೇನು ; ಈ ದೇವಸ್ಥಾನಗಳಿಗೆ ಅಭಿವೃದ್ಧಿ ಪ್ರಾಧಿಕಾರ ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಇದ್ದಲ್ಲಿ, ಅದನ್ನು ಯಾವಾಗ ಜಾರಿಗೆ ತರಲಾಗುವುದು ;

(ಆ) ಈ ದೇವಾಲಯಗಳಿಗೆ ವಾರ್ಷಿಕವಾಗಿ ಸರ್ಕಾರದಿಂದ ನೀಡಲಾಗುವ ಅನುದಾನವೆಷ್ಟು ; ದೇವಸ್ಥಾನಗಳ ಆದಾಯ, ವೆಚ್ಚ ಹಾಗೂ ಬ್ಯಾಂಕು ಠೇವಣಿ ಮೊತ್ತವೆಷ್ಟು ; ಠೇವಣಿ ಮೊತ್ತದ ಮೇಲೆ ಸಂಗ್ರಹಿಸಲಾದ ಬಡ್ಡಿ ಮೊತ್ತವನ್ನು ಯಾವ ಉದ್ದೇಶಗಳಿಗೆ ಬಳಸಿಕೊಳ್ಳಲಾಗುತ್ತಿದೆ ; ಅದರ ನಿಯಮಾವಳಿಗಳೇನು ; ದೇವಸ್ಥಾನಗಳಿಂದ ಧಾರ್ಮಿಕ ದತ್ತಿ ಸಾಮಾನ್ಯ ನಿಧಿಗೆ ಎಷ್ಟು ಮೊತ್ತ ವರ್ಗಾವಣೆ ಮಾಡಲಾಗಿದೆ ;

(ಇ) ಹೆಚ್ಚು ಆದಾಯ ಹೊಂದಿರುವ 'ಎ' ಗ್ರೇಡ್ ದೇವಸ್ಥಾನಗಳ ಆದಾಯವನ್ನು ಅದೇ ವ್ಯಾಪ್ತಿಯ ಕಡಿಮೆ ಆದಾಯದ 'ಸಿ' ದರ್ಜೆ ದೇವಸ್ಥಾನಗಳ ಅರ್ಚಕರ ಸಂಬಳ ಹಾಗೂ ಪೂಜಾ ಸಾಮಗ್ರಿಗಳ ಖರೀದಿಗೆ ಬಳಸುವ ಅವಕಾಶವಿದೆಯೇ ; ಇಲ್ಲದಿದ್ದರೆ, ಈ ದೇವಸ್ಥಾನಗಳಿಗೆ ವಿಶೇಷ ಅನುದಾನ ನೀಡುವ ಬಗ್ಗೆ ಚಿಂತನೆ ಇದೆಯೇ ;

(ಈ) ಈ ದೇವಸ್ಥಾನಗಳ ಸುಪರ್ದಿಯಲ್ಲಿ ನಡೆಯುತ್ತಿರುವ ಶಾಲೆಗಳ ಶಿಕ್ಷಕರಿಗೆ ಸಂಬಳ ನೀಡದಿರಲು ಕಾರಣವೇನು ; ಬಾಕಿ ಮೊತ್ತ ಎಷ್ಟು ; ಅದನ್ನು ಯಾವಾಗ ಬಿಡುಗಡೆ ಮಾಡಲಾಗುವುದು ; ಈ ದೇವಸ್ಥಾನಗಳ ಆದಾಯದ ಸ್ವಲ್ಪ ಭಾಗವನ್ನು ಸ್ಥಳೀಯ ಸರಕಾರಿ ಶಾಲೆಗಳ ಅಭಿವೃದ್ಧಿಗೆ ಬಳಸುವ ವಿಚಾರದಲ್ಲಿ ಇರುವ ತೊಂದರೆಗಳೇನು ; ಅವುಗಳನ್ನು ಪರಿಹರಿಸಲು ಕೈಗೊಂಡಿರುವ ಕ್ರಮಗಳೇನು ;

(ಉ) ಸುಬ್ರಹ್ಮಣ್ಯ ಹಾಗೂ 'ಸಿ' ದರ್ಜೆ ದೇವಸ್ಥಾನಗಳಲ್ಲಿ ಖಾಲಿಯಿರುವ ಪ್ರಧಾನ ಅರ್ಚಕರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಗಳು ಸಲ್ಲಿಕೆಯಾಗಿವೆಯೇ ; ಯಾವಾಗ ನೇಮಕಾತಿ ಪೂರ್ಣಗೊಳ್ಳಲಿದೆ ; ದೇವಸ್ಥಾನಗಳಲ್ಲಿ ಸಿಬ್ಬಂದಿ ನೇಮಕ ಮಾಡುವಾಗ ಸ್ಥಳೀಯ ಅಭ್ಯರ್ಥಿಗಳಿಗೆ ಆದ್ಯತೆ ನೀಡಲು ಅವಕಾಶವಿದೆಯೇ ; ಈ ಕುರಿತು ನಿಯಮ ಮಾರ್ಪಡಿಸುವ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು ?

# ಬಸ್ ನಿಲ್ದಾಣಗಳಲ್ಲಿ ಮೂಲ ಸೌಕರ್ಯಗಳ ಕುರಿತು

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨೨೪ (೨೦೩೯) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಾದ್ಯಂತ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವತಿಯಿಂದ ನಿರ್ಮಿಸಲಾಗಿರುವ ಮತ್ತು ನಿರ್ವಹಣೆಯಲ್ಲಿರುವ ಬಸ್ ನಿಲ್ದಾಣಗಳಲ್ಲಿ ಶೌಚಾಲಯ, ಕುಡಿಯುವ ನೀರು, ವಿಶ್ರಾಂತಿ ಕೊಠಡಿ, ವಿಕಲಚೇತನರಿಗೆ ಅನುಕೂಲಕರ ರ್‍ಯಾಂಪ್ ಮತ್ತು ಸಿಸಿಟಿವಿ ವ್ಯವಸ್ಥೆ, ಅಗ್ನಿಶಾಮಕ ಉಪಕರಣಗಳು, ಮುಂತಾದ ಮೂಲಭೂತ ಸೌಕರ್ಯಗಳು ಅನೇಕ ಕಡೆಗಳಲ್ಲಿ ಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜ್ಯದಲ್ಲಿ ಒಟ್ಟು ಎಷ್ಟು ಬಸ್ ನಿಲ್ದಾಣಗಳು ಕಾರ್ಯನಿರ್ವಹಿಸುತ್ತಿವೆ ; ಅವುಗಳಲ್ಲಿ ಎಷ್ಟು ನಿಲ್ದಾಣಗಳು ಎ–ಗ್ರೇಡ್, ಬಿ–ಗ್ರೇಡ್ ಮತ್ತು ಸಿ–ಗ್ರೇಡ್ ಎಂದು ವರ್ಗೀಕರಿಸಲಾಗಿದೆ ;

(ಇ) ಪ್ರತಿ ವರ್ಗದ ಬಸ್ ನಿಲ್ದಾಣಗಳಿಗೆ ಸಂಬಂಧಿಸಿದಂತೆ ಇರುವ ನಿಗದಿತ ಮೂಲಸೌಕರ್ಯಗಳು ಯಾವುವು ; ಅವುಗಳನ್ನು ಯಾವ ವರ್ಷದಲ್ಲಿ ಪರಿಷ್ಕರಿಸಲಾಗಿದೆ ;

(ಈ) ಕಳೆದ ಮೂರು ವರ್ಷಗಳಲ್ಲಿ ಬಸ್ ನಿಲ್ದಾಣಗಳ ಅಭಿವೃದ್ಧಿ, ದುರಸ್ತಿ ಮತ್ತು ನಿರ್ವಹಣೆಗೆ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ ; ಅದರಲ್ಲಿ ವಾಸ್ತವವಾಗಿ ಖರ್ಚಾದ ಮೊತ್ತ ಎಷ್ಟು ;

(ಉ) ಮಹಿಳೆಯರ ಸುರಕ್ಷತೆ ದೃಷ್ಟಿಯಿಂದ ಪೊಲೀಸ್ ಚೌಕಿ ಅಥವಾ ಭದ್ರತಾ ಸಿಬ್ಬಂದಿ ನಿಯೋಜನೆ ಕುರಿತು ಯಾವ ಮಾರ್ಗಸೂಚಿಗಳು ಜಾರಿಯಲ್ಲಿವೆ ; ರಾಜ್ಯದಲ್ಲಿ ಎಷ್ಟು ಬಸ್ ನಿಲ್ದಾಣಗಳಲ್ಲಿ ಪೊಲೀಸ್ ಚೌಕಿ ಸ್ಥಾಪಿಸಲಾಗಿದೆ ;

(ಊ) ಸಿಸಿಟಿವಿ ಮತ್ತು ಅಗ್ನಿಶಾಮಕ ಸುರಕ್ಷತಾ ವ್ಯವಸ್ಥೆಗಳನ್ನು ಅಳವಡಿಸದಿರುವ ನಿಲ್ದಾಣಗಳ ಪಟ್ಟಿ ಮತ್ತು ಅಳವಡಿಸದಿರಲು ಕಾರಣವೇನು ?

## ಉತ್ತರ ಕರ್ನಾಟಕದಲ್ಲಿ ಕೈಗೊಂಡಿರುವ ಕಾಮಗಾರಿಗಳ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೨೨೫ (೨೦೫೯) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೫–೨೬ನೇ ಸಾಲಿನಲ್ಲಿ ಬೆಳಗಾವಿ, ವಿಜಯಪುರ, ಕಲಬುರಗಿ, ಮತ್ತು ಇತರೇ ಜಿಲ್ಲೆಗಳಿಗೆ ಎಷ್ಟು ರಸ್ತೆ ಮತ್ತು ಸೇತುವೆ ನಿರ್ಮಾಣ ಕಾಮಗಾರಿ ಅನುಮೋದಿಸಲಾಗಿತ್ತು ; ಇದರಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳು ಹಾಗೂ ಬಾಕಿ ಇರುವ ಕಾಮಗಾರಿಗಳು ಎಷ್ಟು ;

(ಆ) ೨೦೨೬–೨೭ನೇ ಸಾಲಿನ ಆಯ–ವ್ಯಯದಲ್ಲಿ ಉತ್ತರ ಕರ್ನಾಟಕಕ್ಕೆ ಪ್ರತ್ಯೇಕ ರಸ್ತೆ ಅಭಿವೃದ್ಧಿ ಪ್ಯಾಕೇಜ್ ಘೋಷಿಸಲಾಗಿದೆಯೇ ;

(ಇ) ಇದ್ದಲ್ಲಿ, ಯಾವ ಯಾವ ಜಿಲ್ಲೆಗಳ ರಸ್ತೆ, ಸೇತುವೆ ಮತ್ತು ಇತರೆ ಕಾಮಗಾರಿಗಳು ಮಂಜೂರು ಆಗಿವೆ ಮತ್ತು ಎಷ್ಟು ಅನುದಾನ ಹಂಚಿಕೆಯಾಗಿದೆ ಎಂಬುದರ ಬಗ್ಗೆ ಮಾಹಿತಿ ನೀಡುವುದು ?

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಕಾಸೂ – 829 600 ಪ್ರತಿಗಳು (ಪಿ6)

**List of Questions for Oral Answers**

**Total No. of Questions - 15**

# LIST - 15

# KARNATAKA LEGISLATIVE COUNCIL

## ONE HUNDRED AND FIFTY EIGHTH SESSION

## (Adjourned Meetings)

## Wednesday, the 25th March, 2026

---

**GROUP - III**

1. Minister for Transport and Muzrai
2. Minister for Public Works
3. Minister for Revenue
4. Minister for Housing, Wakf and Minority Welfare
5. Minister for Animal Husbandry and Sericulture
6. Minister for Fisheries and Ports and Inland Water Transport

---

**REGARDING KANKANWADI ISLAND OF JAMKHANDI TALUK OF BAGALKOT DISTRICT**

**Sri. Nirani Hanamant Rudrappa (Graduates' Constituency) -**

211 (2134) Will the Minister for Fisheries and Ports and Inland Water Transport be pleased to state :-

(a) whether it has come to the notice of the Government that the people of the Kankanwadi Island Area of Jamkhandi taluk of Bagalkot District are struggling for the movement and transportation of sugarcane and other crops grown by them in the said region due to the flood of Krishna River ; if so, the steps taken by the Government ;

(b) the prevailing impediments to provide the large boat in the said island area ; explanation with an appropriate reasons and the contemplation is before the Government to provide the LCT Barja/Mini LCT Barja ; the timelimit within which the same would be provided ;

(c) the stand of the Government to protect the well being of farmers by providing large LCT Barja/Mini LCT Barja in the interest of farmers due to non connectivity to the Kankanwadi Island ;

(d) whether it has come to the notice of the Government that the farmers of this island are in painful situation where they have to transport the crops grown by them by crossing the river ; if so, the clear stand of the Government in this regard ; (details be furnished), the stand of the Government with regard to construction of ramp on both sides of the island ; whether the grant has been provided for the construction work for the same ; if so, the grant that has been provided ; the date on which the grant has been provided ?

## SUSPENSION OF SOCIAL SECURITY MONTHLY PENSION DUE TO FAMILY INCOME LIMIT

**Dr. Yathindra S. (Elected by Legislative Assembly) -**

212 (2049) Will the Minister for Revenue be pleased to state :-

(a) various social security schemes are being implemented by the State Government for the person who are in helpless, weaker condition and destitute widows and physically challenged persons, whether Rs.30,000 has been fixed as family income limit to get the said pensions ;

(b) the family income has increased more than Rs.30,000 from the guarantee schemes after 2023, whether it has come to the notice of the Government that the citizens are not able to avail social security and pension services thereof ; if so, the steps taken by the Government in this regard ? (details be furnished)

## FEE FIXATION FOR SHOOTING IN MUZRAI TEMPLES

**Sri. Madhu G. Madegowda (Graduates' Constituency) -**

213 (2007) Will the Minister for Transport and Muzrai be pleased to state :-

(a) whether is it mandatory to obtain the permission for shooting in all 'A' and 'B' grade temples belonging to Muzrai ;

(b) if so, the details of the fee which has to be paid for shooting of the cinema (Kannada language, other language), serials, documentaries and news channels ; the particulars of conditions therefor ; the purpose for which the collected fee would be utilized ; (complete details be furnished)

(c) whether the Government has intended to revise the fee since more than 10 years have elapsed from the date of fixation of the fee for shooting in Muzrai temples ; if so, the detailed information in this regard be furnished ;

(d) while the fee for shooting of films in Bengaluru city is Rs.15,000/- and in the temples of other places is Rs.10,000/-, the reasons for Rs.16,000/- for Kannada film and Rs.20,000/- fee for other languages only in Melukote of Mandya district ; the particular of criteria has been complied the same has been fixed ; (the detailed information be furnished)

(e) the number of 'A' and 'B' grade temples in the limit of Mandya, Mysuru, Hassan and Chamarajanagar district ; the particulars thereof ; the particulars of temples in which the shooting has been occurred ; the fee that has been collected therein ; (districtwise and templeswise information be furnished)

(f) the fee that has been collected from the shooting of cenima (Kannada language and other language), serial, documentaries and news channels in Melukote of

Mandya district during the last 3 years ; ( yearwise and catagorywise information be furnished)

(g) the particulars of cinema (Kannada language and other language), serial, documentaries which are allowed for shooting ? (details be furnished)

**ROADS OF UTTARA KANNADA DISTRICT**

**Sri. Shantharama Budna Siddi (Nominated) -**

214 (2116) Will the Minister for Public Works be pleased to state :-

(a) since the rural roads which are coming under the Public Works Department in Uttara Kannada district have been ruined completely, whether it has come to the notice of the Government that severe hardship is being caused to commuting daily for tribal, forest dwellers and backward communities in this area ;

(b) if so, the grant that has been provided by the Government to repair the said roads in the district during the current year ; and the particulars of roads work that have been taken up ? (information be furnished)

**REGARDING KARNATAKA STATE ROAD SAFETY AUTHORITY**

**Sri. Ramesh Babu (Nominated) -**

215 (2003) Will the Minister for Public Works be pleased to state :-

(a) the date on which the Karnataka State Road Safety Authority has been constituted ; the functions of the authority ; the number of meetings that have been conducted by the authority so far ;

(b) the particulars of financial assistance schemes which are being provided by the Central Government with regard to the road safety ; (the details of financial

assistance that has been provided by the Central Government for the road safety during the last three years be furnished)

(c) the particulars of road safety measures that have been taken up by the Karnataka State Road Safety Authority in the State ; the details of the activities during the last 3 years be furnished ;

(d) the date on which the hit and run motor accidents scheme has been implemented in the State ; the particulars of victims to whom the compensation is available under this scheme ; the number of victims to whom the compensation has been provided under this scheme so far ; (details of beneficiaries during the last three years be furnished)

(e) the date on which the State Road Safety Policy has been implemented in the State ; once in number of years the Road Safety Policy would be revised ; (the copy of the current safety policy be furnished)

(f) whether the road safety audit has been carriedout in the State ; (if so, its report and details be furnished)

(g) the number of black spots that have been identified on the roads of Karnataka under the Karnataka State Road Safety Authority so far ; the prevailing rules for identifying the black spots ; the steps taken by the Government to reduce the same ? (the details of black spots that have been identified on the roads of the State be furnished)

**DELAY IN CORRECTION OF PHODI**

**Sri. Chidanand M.Gowda (Graduates' Constituency) -**

216 (2109) Will the Minister for Revenue be pleased to state :-

(a) the number of farmers to whom the land has been granted by the Government in Tumakuru district ; (talukwise details be furnished)

(b) the number of farmers to whom the Phodi Durasti has been carriedout for their land ; (talukwise details be furnished) the timelimit within which the durasti would be carried out for the land of remaining farmers ;

(c) whether it has come to the notice of the Government that the hardship is being caused to farmers/land allottees due to the non-availability of necessary documents for Phodi Durasti in taluk office ; if so, the step that would be taken by the Government to carryout the Phodi Durasti when the documents are not available ;

(d) since the farmers have not all required documents and unable to submit the relevant documents for Phodi Durasti the step taken by the Government to obtaining the documents by the Revenue Department itself from the archive office for making Phodi Durasti ;

(e) the survey work is going on slow phase manner due to the shortage of surveyors, the steps taken by the Government for the recruitment of the land surveyors ?

## PROVIDING OWN BUILDING TO CHRISTIAN DEVELOPMENT CORPORATION

**Sri. Ivan D'Souza (Elected by Legislative Assembly) -**

217 (2022) Will the Minister for Housing, Wakf and Minority Welfare be pleased to state :-

(a) the steps taken by the Government to provide own building for the Christian Development Corporation ; the particulars of the place in which it would be constructed ; the amount that has been earmarked therefor ; (details be furnished)

(b) the particulars of the centers in which the officers have been appointed for functioning of the said corporation across the State ; the particulars of cadre of officers who will be incharge for its supervision ; (in this regard clear information be furnished)

(c) whether the State Government has obtained the statistics report with regard to lifestyle, occupation, economic condition and educational status of the Christian community ; (details be furnished)

(d) at present the Christian community belongs to 3B category, they are demanding to include them in 2B or by creating new 2C category for them, the steps taken by the Government in this regard ;

(e) there is a demand from the Christian community for providing provision to visit their holy pilgrimage Jerusalem, in the same manner as other communities, whether it has come to the notice of the Government in this regard ; if so, the steps taken in this regard ? (details be furnished)

**REGARDING INCREASING TASDIK AMOUNT**

**Sri. Prathap Simha Nayak K. (Elected by Legislative Assembly) -**

**Dr. Umashree (Nominated) -**

218 (2075+2071) Will the Minister for Transport and Muzrai be pleased to state :-

(a) the details of the monthly (tasdik) honorarium that is being provided for priests of 'C' category temples in the State ; whether the Government has contemplated to increase this allowance ; if so, whether it has come to the notice of the Government that the details of the honorarium that would be increased ;

(b) the details of the tasdik that is being provided for priests of 'C' category temples of the State at present ;

(c) out of the muzrai temples in the State, 90% of 'C' category temples have been located in rural areas and at present lowest tasdik allowance which is lower than the minimum wages is being providing for priests of these temples, the reasons for any steps have not been initiated by the Government till date to fulfil the demands of the priests eventhough they are in distressed condition ;

(d) the timelimit within which the tasdik allowance would be increased to minimum Rs.10,000 and Rs.5000 would be provided for pooja materials of the temple alongwith necessary step would be taken to provide minimum Rs.5000 per month for other staff who are working in temples ;

(e) the measures taken by the Government for the protection and development of several thousand of acres of land and the precious property-treasure belonging to the temples ? (details be furnished)

## LAYOUT FORMATION BY THE HOUSING DEPARTMENT AND COMPENSATION TO LAND OWNERS

**Sri. Govinda Raju (Elected by Legislative Assembly) -**

219 (2087) Will the Minister for Housing, Wakf and Minority Welfare be pleased to state :-

(a) the number of sites/houses that have been provided to poor and middle class families by the Karnataka Slum Development Board and the Karnataka Housing Board which are coming under the Housing Department from last 3 years till date ; (districtwise information be furnished)

(b) the extent of land in which the vacant sites and apartments have been constructed by the Karnataka Housing Board ; the extent of acres of land that has been purchased for the same ; whether the land compensation has been provided to the land owners ; the amount for the same; the amount that has been accrued by the public through the sale of these site ; (districtwise information be furnished)

(c) the number of houses that have been constructed by the Karnataka Slum Development Board for the poor people who are residing in the slum area ; whether the land where the houses are being constructed is the Government property or private property ; (complete details be furnished)

(d) if the private property has been acquired by the Slum Development Board, the number of private land owners for whom the amount should be given in the form of compensation and the number of TDRs ? (Transferable Development Rights) (compete details be furnished)

**CONSTRUCTION OF ADALITA SOUDHA FOR NEW HAROHALLI TALUK**

**Sri. S. Ravi (Local Authorities Constituency) -**

220 (2137) Will the Minister for Revenue be pleased to state:-

(a) 2 years have been elapsed since Harohalli of Bengaluru South district was declared as the new taluk, whether the places have been identified to construct taluk level offices therein if so, the particulars of offices for which and the places where and the extent of land that has been identified ; (complete details be furnished)

(b) the grant that has been earmarked for the construction and the basic facilities for the office of Adalita Soudha (mini vidhana soudha) in new taluk of Harohalli ; the grant that has been released so far ; the particulars of the basic facilities which are being provided to this office ? (complete details be furnished)

**WORK OF TUMAKURU-NELAMANGALA NATIONAL HIGHWAY**

**Sri. Rajendra Rajanna (Local Authorities Constituency)**

221 (2090) Will the Minister for Public Works be pleased to state :-

(a) whether it has come to the notice of the Government that the continuous traffic congestion and accident cases are being increased due to the work of Tumakuru-Nelamangala highway has been slowdown ;

(b) if so, the timelimit within which the work of Tumakuru-Nelamangala highway would be completed ?

## COMPREHENSIVE DEVELOPMENT OF SRI HULIGEMMA DEVI TEMPLE

**Smt. Hemalatha Nayak (Elected by Legislative Assembly) -**

222 (2122) Will the Minister for Transport and Muzrai be pleased to state :-

(a) the total income that has been accrued to Sri Huligemma Temple during the year 2025-2026 ;

(b) the amount of the action plan and master plan that has been prepared for the comprehensive development of Sri Huligemma Devi Temple; the estimated expenditure of the project ;

(c) the particulars of basic facilities which are included in this project ; (details be furnished)

(d) whether the approval has been accorded by the Government for the said action plan and master plan ; if so, the date on which the approval has been accorded ; the copy of the relevant Government Order (G.O) be furnished ;

(e) the date on which the project would be implemented ; the particulars of works that have been commenced at present ; the details of their expenditure, name of the contractor and the period of completion be furnished ;

(f) whether it has come to the notice of the Government that the hardship is being caused due to lack of necessary basic facilities for the devotees in the temple ; if so, the steps that would be taken by the Government for the permanent solution ?

## UTILIZATION OF RESOURCE OF MUZRAI TEMPLES OF THE STATE

**Sri. Manjunatha Bhandari (Local Authorities Constituency) -**

223 (2114) Will the Minister for Transport and Muzrai be pleased to state :-

(a) the particulars of informations which are available in the official records of the Government with regard to history of these four temples such as Kukke Sri Subramanya, Kadri Sri Manjunatha, Sri Mangaluru Mangala Devi and Kolluru Mookambike which are located in Dakshina Kannada and Udupi districts ; whether the proposal is before the Government to constitute development authority for these temples ; if so, the date on which it would it be implemented ;

(b) the annual grant that would be provided by the Government to these temples ; the income, expenditure and bank deposit of these temples ; the particulars of purposes for which the collected interest on the deposit amount is being utilized ; the rules thereof ; the amount that has been transferred from the temples to the General Fund of Religious Endowment ;

(c) whether there is a provision to utilize the income of 'A' Grade temples which have higher income for the salary of priests and purchase of puja materials for 'C' grade temples which have low income in the same jurisdiction ; if not, whether there is a contemplation with regard to providing special grant to these temples ;

(d) the reason for non payment for the teachers of schools which are running under the management of these temples ; the pending amount for the same ; the date on which it would be released ; the prevailing hurdles with regard to utilizing a portion of the income of these temples for the development of local government schools ; the steps taken by the Government to resolve the same ;

(e) whether the proposals have been submitted to the Government to fill up the vacant chief priests posts in subramanya and 'C' grade temples ; the date on which the appointment would be completed ; whether there is

a provision to provide the priority for local candidates while appointing the staff in temples ; the clear stand of the Government with regard to modification of the rules in this regard ?

## BASIC FACILITIES IN BUS STANDS

**Sri. Kishor Kumar Puttur (Local Authorities Constituency) -**

224 (2039) Will the Minister for Transport and Muzrai be pleased to state :-

(a) whether it has come to the notice of the Government that basic facilities like toilets, drinking water, rest rooms, convenient ramps for disabled persons and CCTV system, fire fighting equipment etc are not available in many places in the bus stands that have been constructed and maintained by the Karnataka State Road Transport Corporation across the State ;

(b) the number of bus stands which are functioning in the State ; out of which, the number of bus stands that have been classified into A-grade, B-grade and C-grade ;

(c) the particulars of prescribed basic facilities with regard to bus stands of each category ; the year in which the same have been revised ;

(d) the grant that has been sanctioned for the development, repair and maintenance of bus stands during the last three years ; out of which, the actual amount that has been spent ;

(e) the particulars of guidelines that have been enforced with regard to development of police chowkis or deployment of security personnel for the safety of women ; the number of bus stands in which the police chowkis have been established in the State ;

(f) the list of bus stands in which CCTV and fire safety systems have not installed and the reason for not installing the same ?

## WORKS TAKEN UP IN NORTH KARNATAKA DISTRICTS

**Sri. Nagaraju M. (Elected by Legislative Assembly) -**

225 (2059) Will the Minister for Public Works be pleased to state :-

(a) the number of roads and bridge construction works that have been approved to Belagavi, Vijayapur, Kalaburagi and other districts during the year 2025-26 ; out of which, the number of works that have been completed and remaining pending ;

(b) whether the separate road development package has been declared to the North Karnataka in the budget for the year 2026-27 ;

(c) if so, the particulars of districts for which the road, bridge and other works have been sanctioned and the information of the grant that has been allocated be furnished ?

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru, WD- 829 - 600 Copies (P6)